**<u>ಸಾಕ್ಷಿಯನ್ನು ದಿಃ 04.10.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ 2ನೇ ಆರೋಪಿ ಪರ ಶ್ರೀ.ಜೆ.ಬಿ. ವಕೀಲರಿಂದಃ</u>**

ನಿಪಿ-5 ರಲ್ಲಿ 2ನೇ ಆರೋಪಿಯ ಹೆಸರು ಇಲ್ಲ. ನಿಪಿ-5 ರಲ್ಲಿ 1ನೇ ಆರೋಪಿಯ ಹೆಸರು ಸಹ ಇಲ್ಲ. ಸಾಕ್ಷಿ ಸ್ವತಃ 1ನೇ ಆರೋಪಿಯ ಕಚೇರಿಯ ದೂರವಾಣಿ ಸಂಖ್ಯೆ ಮತ್ತು ಮೊಬೈಲ್ ಸಂಖ್ಯೆ ನಿಪಿ-5 ರಲ್ಲಿ ಇದೆ ಎಂದು ಹೇಳುತ್ತಾರೆ. ನಿಪಿ-7 ದೂರಿನ 2ನೇ ಪುಟದ 2ನೇ ಸಾಲಿನಲ್ಲಿ 2ನೇ ಆರೋಪಿಯ ಮೊಬೈಲ್ ಸಂ.9945702984 ಕಾಣಿಸಲಾಗಿದೆ ಎಂದರೆ ಸರಿ. ನಿಪಿ-7 ರಲ್ಲಿರುವ ಆ ಮೊಬೈಲ್ ಸಂಖ್ಯೆ 2ನೇ ಆರೋಪಿಯದ್ದಾಗಿರುತ್ತದೆ. ನಿಪಿ-5 ರಲ್ಲಿ 2ನೇ ಆರೋಪಿಯ ಮೊಬೈಲ್ ಸಂಖ್ಯೆ ಇಲ್ಲ. ನಿಪಿ-5 ರ ಬ್ರೋಚರ್ ನ ಮೂಲ ಪ್ರತಿ ಎಲ್ಲಿ ಇದೆ ಎಂದು ಗೊತ್ತಿಲ್ಲ.

ಪ್ರಃ ನಿಪಿ-5 ಬ್ರೋಚರ್ ನ ಮೂಲ ಪ್ರತಿ ಯಾವ ಯಾವ ಬಣ್ಣದಲ್ಲಿದೆ?

ಉಃ ನಿಪಿ-5 ಬ್ರೋಚರ್ ನ ಮೂಲ ಪ್ರತಿ ನಾನು ನೋಡಿಲ್ಲ.

ನಿಪಿ-5 ಬ್ರೋಚರ್ ನ ಮೂಲ ಪ್ರತಿಯನ್ನು ನೋಡಿದರೆ ಗುರ್ತಿಸುತ್ತೇನೆ. ನಿಪಿ-5 ಬ್ರೋಚರ್ ಎ4 ಸೈಜಿನಲ್ಲಿದೆ. ನಿಪಿ-5 ಬ್ರೋಚರ್ ನ ಮೂಲ ಪ್ರತಿ ಚಿಕ್ಕದಿದೆ. ನಿಪಿ-5 ಬ್ರೋಚರ್ ನ ಮೇಲೆ 1ನೇ ಆರೋಪಿಯ ಸಹಿ ಪಡೆದುಕೊಂಡಿಲ್ಲ. ನಿಪಿ-5 ಬ್ರೋಚರ್ ಅನ್ನು ಮಾಹಿತಿಗಾಗಿ ನನಗೆ ನೀಡಿದ್ದಾರೆ. ನಿಪಿ-5 ರ ಬ್ರೋಚರ್ ನಲ್ಲಿ ಲೈಸನ್ಸ್ ನಂಬರ್ ಇಲ್ಲ. ನಿಪಿ-5 ರ ಬ್ರೋಚರ್ ನಲ್ಲಿ ಲೈಸನ್ಸ್ ನಂಬರ್ ಇಲ್ಲದ ಕಾರಣ 2ನೇ ಆರೋಪಿಗೂ ಆ ಕಂಪನಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಮೂಲ ದಾಖಲೆಗಳನ್ನು ತಂದರೆ ಕಂಪನಿಗೂ ಮತ್ತು 2ನೇ ಆರೋಪಿಗೂ ಸಂಬಂಧ ಗೊತ್ತಾಗುತ್ತದೆ ಎಂದು ಹೇಳುತ್ತಾರೆ. ಬ್ಲೂನಿಶು ಟ್ರೆಂಡ್ ಲಿಂಕ್ ಕಂಪನಿಯ ಲೈಸನ್ಸ್ ಅನ್ನು ನನಗೆ ತೋರಿಸಿಲ್ಲ.

ಪ್ರಃಲೈಸನ್ಸ್ ಪ್ರತಿಯನ್ನು ಪಡೆಯಲು ಏನಾದರೂ ತೊಂದರೆಯಿತ್ತಾ?

ಉಃ ನನಗೆ ಲೈಸನ್ಸ್ ಪ್ರತಿಯನ್ನು ತೋರಿಸಿ ಅದನ್ನು ಅವರೆ ಇಟ್ಟುಕೊಂಡಿದ್ದಾರೆ.

ಬ್ಲೂನಿಶು ಟ್ರೆಂಡ್ ಲಿಂಕ್ ಕಂಪನಿ 1ನೇ ಆರೋಪಿಯ ಹೆಸರಿನಲ್ಲಿ ನೊಂದಣಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಬ್ಲೂನಿಶು ಟ್ರೆಂಡ್ ಲಿಂಕ್ ಕಂಪನಿ ಹಾಗೂ 2ನೇ ಆರೋಪಿಗೆ ಸಂಬಂಧವಿಲ್ಲ ಎಂದರೆ ಸರಿಯಲ್ಲ. 2ನೇ ಆರೋಪಿಯ ಹೆಸರಿನಲ್ಲಿ ಗ್ಲೋಬ್ ಕ್ಯಾಪಿಟಲ್ ಎಂಬ ಕಂಪನಿ ನೊಂದಣಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಗ್ಲೋಬ್ ಕ್ಯಾಪಿಟಲ್ ಕಂಪನಿಗೆ ಸಂಬಂಧಿಸಿದ ದಾಖಲೆಗೆ ಪೊಲೀಸ್ ಮುಖಾಂತರ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ ಎಂದರೆ ಸುಳ್ಳು. ಗ್ಲೋಬ್ ಕ್ಯಾಪಿಟಲ್ ಕಂಪನಿಯನ್ನು 2ನೇ ಆರೋಪಿಯ ವೈಯಕ್ತಿಕ ವ್ಯವಹಾರಕ್ಕೆ ಸಂಬಂಧಿಸಿದಂತೆ ನೊಂದಣಿ ಮಾಡಿಸಿದ್ದಾರೆ ಎಂದರೆ ಸುಳ್ಳು. ಬ್ಲೂನಿಶು ಟ್ರೆಂಡ್ ಲಿಂಕ್ ಕಂಪನಿ ಜೊತೆ ವ್ಯವಹಾರ ಮಾಡಿ 1ನೇ ಆರೋಪಿ ಸಿಗಲಿಲ್ಲ ಎಂಬ ಕಾರಣದಿಂದ ಗ್ಲೋಬ್ ಕ್ಯಾಪಿಟಲ್ ಕಂಪನಿಯನ್ನು ಬ್ಲೂನಿಶು ಟ್ರೆಂಡ್ ಲಿಂಕ್ ಕಂಪನಿ ಜೊತೆ ಲಿಂಕ್ ಮಾಡಿ 2ನೇ ಆರೋಪಿಯ ವಿರುದ್ದ ಸುಳ್ಳು ಪ್ರ.ವ.ವರದಿಯನ್ನು ಹಾಕಿಸಿದ್ದೇನೆ ಎಂದರೆ ಸರಿಯಲ್ಲ.

ನಿಪಿ-6 ಅಗ್ರಿಮೆಂಟ್ ನ ಮೂಲಪ್ರತಿಯನ್ನು ಚೆಕ್ ಬೌನ್ಸ್ ಪ್ರಕರಣದಲ್ಲಿ ಬೇರೊಂದು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೇನೆ. ಸಿಸಿ ನಂ.22759/2017 ರ ಪ್ರಕರಣದಲ್ಲಿ ಹಾಜರುಪಡಿಸಿದ ನಿಪಿ-6 ಅಗ್ರಿಮೆಂಟ್ ನ ಮೂಲ ಪ್ರತಿಯನ್ನು ಈ ನ್ಯಾಯಾಲಯಕ್ಕೆ ತಂದು ಹಾಜರುಪಡಿಸಬಹುದು. ಸಿಸಿ ನಂ.22759/2017 ರ ಪ್ರಕರಣದಲ್ಲಿ ನಿಪಿ-6 ಅಗ್ರಿಮೆಂಟ್ ನ ಸತ್ಯಸತ್ಯತೆಯ ಬಗ್ಗೆ ಪಾಟೀ ಸವಾಲು ಆಗಿಲ್ಲವೆಂದರೆ ಸರಿ. ಸಾಕ್ಷಿಗೆ ಸಿಸಿ ನಂ.22759/2017 ರ ಆರ್ಡರ್ ಶೀಟ್ ನ ದೃಡೀಕೃತ ನಕಲನ್ನು ತೋರಿಸಲಾಗಿ ಅವರು ಒಪ್ಪಿದ್ದು ಅದನ್ನು ನಿಡಿ-1 ಎಂದು ಗುರ್ತಿಸಲಾಯಿತು. ನಿಡಿ-1 ರ ಪ್ರಕಾರ ಆರೋಪಿಗೆ ಯಾವತ್ತು ವಾರೆಂಟ್ ಆಗಿಲ್ಲ ಎಂದರೆ ಸರಿಯಲ್ಲ. ದಿಃ09.01.2020 ರಂದು ಸಿಸಿ ನಂ.22759/2017 ರಲ್ಲಿ ಸ್ಟೆಪ್ಸ್ ತೆಗೆದುಕೊಳ್ಳದ ಕಾರಣ ವಜಾ ಆಗಿದೆ ಎಂದರೆ ಸರಿ. ಸಾಕ್ಷಿ ಸ್ವತಃ ಅದಕ್ಕಿಂತ ಹಿಂದೆ

ಆರೋಪಿಗೆ ನ್ಯಾಯಾಲಯ ವಾರೆಂಟ್ ಹೊರಡಿಸಿದೆ ಎಂದು ಹೇಳುತ್ತಾರೆ. ಸಾಕ್ಷಿಗೆ ಚೆಕ್ ಬೌನ್ಸ್ ಪ್ರಕರಣಕ್ಕೆ ಸಂಬಂಧಿಸಿದಂತೆ ಖಾಸಗಿ ಪಿರ್ಯಾದಿನ ದೃಡೀಕೃತ ನಕಲನ್ನು ತೋರಿಸಲಾಗಿ ಅವರು ಒಪ್ಪಿದ್ದು ಅದನ್ನು ನಿಡಿ-2 ಎಂದು ಗುರ್ತಿಸಲಾಯಿತು. ಈ ಪ್ರಕರಣದಲ್ಲಿ ಆರೋಪಿ ಮೋಸ ಮಾಡಿದ್ದಾರೆ ಎಂದು ಹೇಳಿರುವ ವಿಚಾರಕ್ಕೆ ಸಂಬಂಧಿಸಿ ನಿಡಿ-2 ಖಾಸಗಿ ದೂರನ್ನು 22ನೇ ಎಸಿಜೆಎಂ ನ್ಯಾಯಾಲಯದಲ್ಲಿ ದಾಖಲಿಸಲಾಗಿತ್ತು ಎಂದರೆ ಸರಿ.

ಪ್ರಃ ನೀವು ಮತ್ತು 1ನೇ ಆರೋಪಿ ಮಾತುಕತೆ ಮಾಡಿದ ನಂತರ 1ನೇ ಆರೋಪಿ ನಿಮಗೆ ಚೆಕ್ ಕೊಟ್ಟಿದ್ದಾರೆ?

ಉಃ ಇಷ್ಟು ಅಮೊಂಟ್ ಆಗಿದೆ ಎಂದು ತಿಳಿಸಿ 1ನೇ ಆರೋಪಿ ನನಗೆ ಪೋಸ್ಟ್ ಡೇಟೆಡ್ ಚೆಕ್ ನೀಡಿದ್ದಾರೆ.

ಯಾವ ಯಾವ ದಿನಾಂಕದಂದು 1ನೇ ಆರೋಪಿ ಚೆಕ್ ನೀಡಿದ್ದಾರೆ ಎಂದು ನನಗೆ ಹೇಳಲು ಸಾಧ್ಯವಿಲ್ಲ. ಚೆಕ್ ಗೆ ಬ್ಯಾಂಕಿಗೆ ಹಾಜರುಪಡಿಸಿದಾಗ 1ನೇ ಆರೋಪಿ ಬ್ಯಾಂಕ್ ಖಾತೆಯಲ್ಲಿ ಸಾಕಷ್ಟು ಹಣವಿಲ್ಲವೆಂದು ಹಿಂಬರಹ ನೀಡಿರುತ್ತಾರೆ. ನಾನು ಹಾಕಿದ ಚೆಕ್‌ಗೆ 1ನೇ ಆರೋಪಿ ಸ್ಟಾಪ್ ಪೇಮೆಂಟ್ ಇನ್‌ಸ್ಟ್ರಕ್ಷನ್ ಬ್ಯಾಂಕಿಗೆ ಕೊಟ್ಟಿದ್ದಾರೆ ಎಂದರೆ ಸರಿ. ಸಾಕ್ಷಿಗೆ ರಿಟರ್ನ್ ಮೆಮೋದ ಪ್ರತಿಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ಒಪ್ಪಿರುತ್ತಾರೆ. ಯಾವ ಕಾರಣಕ್ಕಾಗಿ ಸ್ಟಾಪ್ ಪೇಮೆಂಟ್ ಮಾಡಿದ್ದಾರೆ ಎಂದು 1ನೇ ಆರೋಪಿಯಲ್ಲಿ ಕೇಳಿಲ್ಲ ಕಾರಣ ಅವರು ಪರಾರಿಯಾಗಿದ್ದಾರೆ. ದಿಃ31.07.2017 ರಂದು 1ನೇ ಆರೋಪಿಗೆ ಲೀಗಲ್ ನೊಟೀಸ್ ಕಳುಹಿಸಿದ್ದೇನೆ ಎಂದರೆ ಸರಿ. ಸಾಕ್ಷಿಗೆ ರಿಟರ್ನ್ ಮೊಮೋ ಹಾಗೂ ಲೀಗಲ್ ನೊಟೀಸ್ ನ ದೃಡೀಕೃತ ಪ್ರತಿಗಳನ್ನು ತೋರಿಸಲಾಗಿ ಒಪ್ಪಿದ್ದು ಅವುಗಳನ್ನು ನಿಡಿ-3 ಮತ್ತು 4 ಎಂದು ಗುರ್ತಿಸಲಾಯಿತು.

ಲೀಗಲ್ ನೊಟೀಸನಲ್ಲಿ 2ನೇ ಆರೋಪಿಯ ಬಗ್ಗೆ ಒಂದೇ ಒಂದು ಪದವನ್ನು ಹೇಳಿಲ್ಲ ಎಂದರೆ ಸರಿ. ಸಾಕ್ಷಿ ಸ್ವತಃ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರು ಪೊಲೀಸ್ ಕಮೀಷನರ್ ಗೆ ನೀಡಿದ ದೂರಿನಲ್ಲಿ 2ನೇ ಆರೋಪಿಯ

ಬಗ್ಗೆ ಹೇಳಿದ್ದೇನೆ ಎಂದು ಹೇಳುತ್ತಾರೆ. 2ನೇ ಆರೋಪಿಯನ್ನು ನಿಡಿ-4 ಲೀಗಲ್ ನೋಟೀಸ್ ನಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ನಿಡಿ-2 ಖಾಸಗಿ ದೂರಿನಲ್ಲಿ 2ನೇ ಆರೋಪಿಯನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸಿಸಿ ನಂ.22759/2017 ರ ಪ್ರಕರಣದ ಪ್ರಮಾಣೀಕೃತ ಹೇಳಿಕೆಯಲ್ಲಿ 2ನೇ ಆರೋಪಿಯ ಬಗ್ಗೆ ಹೇಳಿಲ್ಲ ಎಂದರೆ ಸರಿ. ನನ್ನ ವಕೀಲರೊಂದಿಗೆ ಚರ್ಚಿಸಿ ಗಂಡನೊಂದಿಗೆ ಹೆಂಡತಿಯನ್ನು ಸೇರಿಸಿದರೆ ಹಣ ಬರುತ್ತದೆ ಎಂಬ ಕಾರಣಕ್ಕೆ 2ನೇ ಆರೋಪಿಯನ್ನು ಈ ಪ್ರಕರಣದಲ್ಲಿ ಸೇರಿಸಲಾಗಿದೆ ಎಂದರೆ ಸರಿಯಲ್ಲ. 1 ಮತ್ತು 2ನೇ ಆರೋಪಿ ಸೇರಿ ಕೃತ್ಯ ಎಸಗಿದ್ದಾರೆ ಎಂದು ಖಾಸಗಿ ದೂರಿನಲ್ಲಿ, ಪ್ರಮಾಣೀಕೃತ ಹೇಳಿಕೆಯಲ್ಲಿ ಮತ್ತು ಲೀಗಲ್ ನೋಟೀಸಿನಲ್ಲಿ ಹೇಳಿಲ್ಲ ಎಂದರೆ ಸರಿ. ಚೆಕ್ ಬೌನ್ಸ್ ಪ್ರಕರಣದ ಬೆಂಗಳೂರು ಪೊಲೀಸ್ ಕಮೀಷನರ್ ರವರಿಗೆ ಕೊಟ್ಟ ದೂರಿನ ಬಗ್ಗೆ ಹೇಳಲು ತೊಂದರೆ ಇರಲಿಲ್ಲ. ನಿಪಿ-5 ರ ಮೂಲ ಪ್ರತಿ ಚೆಕ್ ಬೌನ್ಸ್ ಪ್ರಕರಣದಲ್ಲಿ ಹಾಜರುಪಡಿಸಲಾಗಿದೆ ಎಂದರೆ ಸರಿ. ನನ್ನ ಮತ್ತು 1ನೇ ಆರೋಪಿಯ ನಡುವೆ ಆದ ವ್ಯವಹಾರಕ್ಕೆ ಸಂಬಂಧಿಸಿದಂತೆ ನಿಪಿ-5 ರ ಮೂಲ ಪ್ರತಿಯನ್ನು ಚೆಕ್ ಬೌನ್ಸ್ ಪ್ರಕರಣದಲ್ಲಿ ಆ ವ್ಯವಹಾರ ದೃಡೀಪಡಿಸಲು ಹಾಜರುಪಡಿಸಿದ್ದೇನೆ ಎಂದರೆ ಸಾಕ್ಷಿ ಆ ದಾಖಲೆಯನ್ನು ಒಂದು ಸಪೊರ್ಟಿಂಗ್ ದಾಖಲೆಯಾಗಿ ಹಾಜರುಪಡಿಸಿದ್ದೇನೆ ಎಂದು ಹೇಳುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**